| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

**A1 – 2024**

| ವಿಷಯ ಸಂಕೇತ / Subject Code | 01 (NS) |
|---|---|

# ಕನ್ನಡ / KANNADA

[ಸಮಯ: 3 ಗಂಟೆ 15 ನಿಮಿಷಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 56] [ಗರಿಷ್ಠ ಅಂಕಗಳು : 80]

[Time : 3 Hours 15 Minutes] [Total No. of questions : 56] [Max. Marks : 80]

ಸೂಚನೆ : "ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ – ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಸೀತೆಯನ್ನು ರಾವಣ ಎಲ್ಲಿರಿಸಿದ್ದನು?

(ಅ) ಅಂತಃಪುರದಲ್ಲಿ (ಆ) ಶಾಂತಿ ಜಿನಭವನದಲ್ಲಿ

(ಇ) ಪ್ರಮದವನದಲ್ಲಿ (ಈ) ನಿಜನಿವಾಸದಲ್ಲಿ

2) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

(ಅ) ಮರ್ಕಟನ (ಆ) ಅಂಧಕನ

(ಇ) ಹಂದೆಯ (ಈ) ಶರಣನ

P.T.O.

3) ವಲ್ಲಭೆಯೆ ಬರವೇನು ಮುಖದಲಿ
ತಲ್ಲಣವೆ ತಲೆದೋರುತಿದೆ ತಳು
ವಿಲ್ಲದುಸುರಿರುಳೇಕೆ ಬಂದೆ ಲತಾಂಗಿ ಹೇಳೆಂದ. – ಹೀಗೆಂದು ದ್ರೌಪದಿಯನ್ನು ಪ್ರಶ್ನಿಸಿದವರು ಯಾರು?

(ಅ) ಭೀಮ (ಆ) ಅರ್ಜುನ
(ಇ) ಯಮಸುತ (ಈ) ಕೀಚಕ

4) ಕವಿ ಬೇಂದ್ರೆಯವರ ಪ್ರಕಾರ ಯಾವುದು ಮತ್ತೆ ಚಿಗುರಬಹುದು?

(ಅ) ಬಾನು (ಆ) ನದಿ
(ಇ) ಹರೆಯ (ಈ) ಮರ

5) ಲಕ್ಷ ದಾರಿಗಳ ಚದುರಂಗದಾಟ ಯಾವುದು?

(ಅ) ವಿದ್ಯೆ (ಆ) ಜೀವನ
(ಇ) ರಸ್ತೆಯಂಚು (ಈ) ಕಂಡದ್ದು

6) ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ?

(ಅ) ಕಮಲಮ್ಮ ಟೀಚರ್ (ಆ) ಕೀರ್ತಿ
(ಇ) ಮುದ್ದೇಗೌಡರು (ಈ) ಸೀತಾ

7) "ಇದೆಲ್ಲ ಸಾಕು ಮಾರಾಯ, ಯಾವತ್ತೂ ನಮ್ಮ ಮುಸುರೆ ಪಾತ್ರೆಗಳನ್ನು ನುಂಗದ ಹೊಳೆ ಇವತ್ತು ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿ ಲೋಟವನು ನುಂಗಿತನಾ..." – ಎಂದು ದಣಿಪತ್ನಿಯು ಚೀರಿದ್ದರ ಅರ್ಥವೆಂದರೆ ............

(ಅ) ಚಿನ್ನಮ್ಮನ ಕುಟುಂಬವೆ ಬೆಳ್ಳಿ ಲೋಟವನ್ನು ಅಪಹರಿಸಿದೆಯೆಂಬುದು
(ಆ) ನದಿಯ ಬಗ್ಗೆ ದಣಿಪತ್ನಿಗೆ ನಂಬುಗೆಯಿದೆ
(ಇ) ಕುದುಪನ ಕುಟುಂಬವು ಬೆಳ್ಳಿ ಲೋಟವನ್ನು ಅಪಹರಿಸಿಲ್ಲವೆಂಬುದು
(ಈ) ವೆಂಕಪ್ಪಯ್ಯನವರು ಬೆಳ್ಳಿ ಲೋಟವನ್ನು ಹುಡುಕಿಸಿಲ್ಲವೆಂಬುದು

8) ಆನೆಯ ಮಾವುತನ ಹೆಸರೇನು?

(ಅ) ಕೃಷ್ಣೇಗೌಡ (ಆ) ನಾಗರಾಜ

(ಇ) ವೇಲಾಯುಧ (ಈ) ಶಿವೇಗೌಡ

9) ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

(ಅ) ಈ ಆನೆಯಿಂದ ಐದು ಜನರು ಪ್ರಾಣ ಕಳೆದುಕೊಳ್ಳುತ್ತಾರೆ

(ಆ) ಈ ಆನೆಯನ್ನು ಯಾರಿಗೂ ಮಾರಬಾರದು

(ಇ) ಈ ಆನೆಯು ಕಾಡಿಗೆ ಓಡಿ ಹೋಗುತ್ತದೆ

(ಈ) ಈ ಆನೆಯನ್ನು ಕಟ್ಟಿ ಹಾಕಬಾರದು

10) "ಅದೇನ್ಮಾಡುತ್ತಯ್ಯಾ ಆನೆ. ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ತೀರಲ್ಲಯ್ಯಾ. ಬಾಯಿಲ್ಲದೋರು ಈ ಪ್ರಪಂಚದಲ್ಲಿ ಬದುಕೋಹಂಗೇ ಇಲ್ಲವೇನಯ್ಯಾ?" – ಹೀಗೆಂದು ನಿರೂಪಕರು ದುರ್ಗಪ್ಪನಿಗೆ ಹೇಳಿದ ಮಾತಿನಲ್ಲಿ ವ್ಯಕ್ತವಾಗುವ ಭಾವ _________.

(ಅ) ಆನೆ ಗೌರಿಯ ಬಗೆಗೆ ನಿರೂಪಕರಲ್ಲಿರುವ ಸಹಾನುಭೂತಿ

(ಆ) ದುರ್ಗಪ್ಪನ ಬಗೆಗೆ ಕೋಪ

(ಇ) ವಿದ್ಯುತ್ ಇಲಾಖೆಯ ಬಗ್ಗೆ ಅಸಹನೆ

(ಈ) ಬಾಯಿ ಇರುವವರ ಬಗ್ಗೆ ಅಸಮಾಧಾನ

(ಆ) ಬಿಟ್ಟ ಸ್ಥಳಗಳನ್ನು ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ! **(5 × 1 = 5)**

(ಮನೋರಮೆ, ಡಾ.ಸಿ.ಎನ್.ಆರ್.ರಾವ್, ಕಾರ್ವೆರ್ ಮಾರ್ಷ್, ಇಂದ್ರಭವನ, ಶಿವಸುಬ್ರಮಣ್ಯ ಅಯ್ಯರ್, ಚಂದ್ರಭವನ)

11) ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ _________.

12) _________ ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದರು.

13) ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ________.

14) 'ಕನ್ನಡವು ಕಸ್ತೂರಿಯಲ್ಲವೆ?' ಎಂದವರು ________.

15) ________ ಎಂಬುದು ಲೇಖಕರು ಹೇಳಿದ ಹಳ್ಳಿಯ ಹೋಟೆಲಿನ ಹೆಸರು.

(ಇ) ಹೊಂದಿಸಿ ಬರೆಯಿರಿ. **(5 × 1 = 5)**

| | 'ಅ' ಪಟ್ಟಿ | | 'ಬ' ಪಟ್ಟಿ |
|---|---|---|---|
| 16) | ಜಾಲಿಯ ಮರದಂತೆ | ಅ) | ಸುಕನ್ಯಾ ಮಾರುತಿ |
| 17) | ಹಬ್ಬಲಿ ಅವರ ರಸಬಳ್ಳಿ | ಆ) | ಟಿ. ಯಲ್ಲಪ್ಪ |
| 18) | ಶಿಲುಬೆ ಏರಿದ್ದಾನೆ | ಇ) | ಪುರಂದರದಾಸರು |
| 19) | ಹತ್ತಿ.....ಚಿತ್ತ.....ಮತ್ತು | ಈ) | ಜಿ.ಎಸ್. ಶಿವರುದ್ರಪ್ಪ |
| 20) | ಒಮ್ಮೆ ನಗುತ್ತೇವೆ | ಉ) | ಕೆ.ಎಸ್. ನಿಸಾರ್ ಅಹಮದ್ |
| | | ಊ) | ಜನಪದ |

## ಆ – ವಿಭಾಗ

II. (ಅ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **(3 × 2 = 6)**

21) ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

22) ಹಿತ್ತಾಳೆಗಿಂತ ಬಲುಹೀನ ಯಾವುದು?

23) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನೆಂದು ಹೇಳಿದ್ದಾರೆ?

24) ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

**(ಆ) ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **(2 × 2 = 4)**

25) ಡಾ. ಚಂದ್ರಪ್ಪನವರು ಬಸಲಿಂಗನಿಗೆ ಡಾ. ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

26) ಮಾರ್ಷ್‌ನನ್ನು ಕಂಡ ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

27) ಮುದ್ದಣನನ್ನು ಮನೋರಮೆಯು ಹೇಗೆ ಉಪಚರಿಸಿದಳು?

28) ಹಳ್ಳಿಯ ಚಹಾ ಹೋಟೆಲುಗಳು ಹೇಗಿರುತ್ತವೆ?

**(ಇ) ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **(3 × 2 = 6)**

29) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ಕಷ್ಟವಾದುದೇಕೆ?

30) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

31) ನಾಯಿಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

32) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ – ವಿಭಾಗ

III. **(ಅ) ಯಾವುದಾದರೂ ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ. **(2 × 3 = 6)**

33) ಯಮಸುತಂಗರುಹುವೆನೆ ಧರ್ಮಕ್ಷಮೆಯ ಗರ ಹೊಡೆದಿಹುದು.

34) ಕುಳಿತು ಕೆಮ್ಮುವ ಪ್ರಾಣಿ.

35) "ಎಷ್ಟು ಸಲವಮ್ಮ ಹೇಳುವುದು ನಿನಗೆ?"

**(ಆ) ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ. **(1 × 3 = 3)**

36) ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು.

37) ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ?

**(ಇ) ಯಾವುದಾದರೂ ಒಂದು** ವಾಕ್ಯದ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ. **(1 × 3 = 3)**

38) ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

39) ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

## ಈ – ವಿಭಾಗ

IV. **(ಅ) ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಐದು–ಆರು** ವಾಕ್ಯಗಳಲ್ಲಿ ಉತ್ತರಿಸಿರಿ. **(2 × 4 = 8)**

40) ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

41) ರಕ್ಷಿಸಬೇಕಾದವರೆ ಭಕ್ಷಕರಾದಾಗ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

42) ದ್ರೌಪದಿಯು ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

43) ಜ್ಞಾನವನ್ನು ಹೊಂದುವ ಮಾರ್ಗಗಳು ಯಾವುವೆಂಬುದನ್ನು ಕವಿ ಸೋಮನಾಥ ಹೇಗೆ ವಿವರಿಸಿದ್ದಾನೆ?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.** **(1 × 4 = 4)**

44) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳಾವುವು?

45) ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ?

46) ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.** **(1 × 4 = 4)**

47) ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ?

48) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವೇ? ವಿವರಿಸಿ.

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಸೂಚನೆಗನುಗುಣವಾಗಿ ಉತ್ತರಿಸಿರಿ. **(4 × 2 = 8)**

49) ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ, ಬರೆಯಿರಿ.

ಹುಸಿನಿದ್ದೆ, ಗಟ್ಟಿಪಾದ, ಬೆಳ್ಳಿಲೋಟ

50) ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಬಲ್ಲವರಿಂದ, ಮೊಮ್ಮಗಳನ್ನು, ತಿಮ್ಮಪ್ಪನವರಲ್ಲಿ

51) ಕೆಳಗಿನ ಎರಡು ಪದಗಳ 'ಧಾತು' ಗುರುತಿಸಿ.

ನಲಿಯುತ್ತ, ಓಡುವರು, ಬರೆಯುವರು

52) ಕೆಳಗಿನ ಎರಡು ಪದಗಳ ಕಾಲವನ್ನು ಸೂಚಿಸಿ.

ಹೋದನು, ಕೇಳುತ್ತಾರೆ, ಕುಣಿಯುವರು

53) ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ದಾರಿದೀಪ, ತಲೆಬಾಗು, ಮೊರೆಹೋಗು

54) ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು** ವಿಷಯವನ್ನು ಕುರಿತು ಪ್ರಬಂಧ ರಚಿಸಿ. **(1 × 4 = 4)**

55) ಪುಸ್ತಕಗಳ ಮಹತ್ವ.

**ಅಥವಾ**

ಮೂಢನಂಬಿಕೆಗಳು.

**(ಇ) ಯಾವುದಾದರೂ ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ. **(1 × 4 = 4)**

**(ಸೂಚನೆ :** ಪತ್ರಲೇಖನದಲ್ಲಿ ಹೆಸರು ನಮೂದಿಸದೆ ಸಂಕೇತಾಕ್ಷರಗಳನ್ನು ಬಳಸಬೇಕು. ಉದಾ: ಅ.ಬ.ಕ. ಇತ್ಯಾದಿ)

56) ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಕಾಲೇಜಿನ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಆಹ್ವಾನಿಸಿ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.

---